## ಡಿ.ಸಿ.ಆರ್ ಶಸ್ತ್ರಚಿಕಿತ್ಸೆ ಆಗಿದ್ದರೂ ಸಹ ಕಣ್ಣಿನಲ್ಲಿ ಈಗಲೂ ನೀರು ಸೋರುತ್ತದೆ. ಏಕೆ?

ಈಗಾಗಲೇ ತಿಳಿಸಿರುವಂತೆ 100 ರೋಗಿಗಳಲ್ಲಿ 5 ರೋಗಿಗಳಿಗೆ ಡಿ.ಸಿ.ಆರ್ ಶಸ್ತ್ರಚಿಕಿತ್ಸೆ ಪುನಃ ಬೇಕಾಗಬಹುದು. ಎಂತಹ ರೋಗಿಗಳೆಂದರೆ ಸೋಂಕುಗಳ ದಾಳಿಗೆ ತುತ್ತಾದವರು, ಮೂಗಿನ ಬಳಿ ಗಾಯಗಳಾಗಿರುವವರಿಗೆ ಹಾಗೂ ಆಗಾಗ ಮೂಗಿನ ಅಲರ್ಜಿಗಳು ಮತ್ತು ಶೀತದಿಂದ ಬಳಲುವ ರೋಗಿಗಳಲ್ಲಿ ಕಣ್ಣೀರಿನ ಕೊಳವೆಯು ಮುಚ್ಚಲ್ಪಡುವ ಸಾಧ್ಯತೆ ಇದೆ. ಅಂತಹ ರೋಗಿಗಳಿಗೆ ಡಿ.ಸಿ.ಆರ್ ಶಸ್ತ್ರಚಿಕಿತ್ಸೆಯನ್ನು ಪುನಃ ಮಾಡಬೇಕಾಗುತ್ತದೆ.



## ಡಿ.ಸಿ.ಆರ್ ಶಸ್ತ್ರಚಿಕಿತ್ಸೆಯ ನಂತರ ಆಗಬಹುದಾದ ತೊಂದರೆಗಳೇನು?

ಈ ಶಸ್ತ್ರಚಿಕಿತ್ಸೆಯಾದ ತಕ್ಷಣ ಮೂಗಿನಿಂದ ರಕ್ತಸ್ರಾವವಾಗಬಹುದು. ಮೂಗನ್ನು ಒತ್ತಿ ಹಿಡಿದುಕೊಳ್ಳುವ ಮೂಲಕ ರಕ್ತಸ್ರಾವವನ್ನು ಸಾಮಾನ್ಯವಾಗಿ ನಿಲ್ಲಿಸಬಹುದು. ಸ್ವಲ್ಪ ನೀಲಿಬಣ್ಣದೊಂದಿಗೆ ಕೆಲವು ದಿನಗಳವರೆಗೆ ಕಣ್ಣಿನ ಕೆಳಗೆ ಊತ ಕಂಡುಬರುತ್ತದೆ. ಶಸ್ತ್ರಚಿಕಿತ್ಸೆಯ ನಂತರ ಸೋಂಕು ಮತ್ತು ರಕ್ತಸ್ರಾವವಾಗುವುದು ಅಸಾಮಾನ್ಯ. ರಂಧ್ರವನ್ನು ಮಾಡಿರುವ ಸ್ಥಳದಲ್ಲಿ ಕಲೆ ಕಂಡುಬರುತ್ತದೆ. ಇದು ಕಾಲಕ್ರಮೇಣ ಮಾಸಿ ಹೋಗುತ್ತದೆ. ಈ ಶಸ್ತ್ರಚಿಕಿತ್ಸೆಯು ಯಾವುದೇ ರೀತಿಯಲ್ಲೂ ದೃಷ್ಟಿಯ ಮೇಲೆ ದುಷ್ಪರಿಣಾಮವನ್ನುಂಟು ಮಾಡುವುದಿಲ್ಲ.

## ಅಕ್ಯುಲೋಪ್ಲಾಸ್ಟಿ

**ದೂರವಾಣಿ ಸಂಖ್ಯೆ: 91–80–66121496**

ನಮ್ಮ ವೆಬ್‌ಸೈಟ್ ಅನ್ನು ಭೇಟಿ ಮಾಡಲು ಇಲ್ಲಿ ಸ್ಕ್ಯಾನ್ ಮಾಡಿ

ನಮ್ಮ ಶೈಕ್ಷಣಿಕ ವಿಡಿಯೋಗಳನ್ನು ವೀಕ್ಷಿಸಲು ಇಲ್ಲಿ ಸ್ಕ್ಯಾನ್ ಮಾಡಿ


**ಎನ್.ಎನ್–1** #121/ಸಿ, ಕಾರ್ಡ್ ರಸ್ತೆ, ರಾಜಾಜಿನಗರ, 1ನೇ 'ಆರ್' ಬ್ಲಾಕ್
ಬೆಂಗಳೂರು–560010, ಭಾರತ
ಟೆಲಿಫೋನ್: +91–80–66121643
ಅಕ್ಯುಲೋಪ್ಲಾಸಿ ವಿಭಾಗ +91-80-66121398
Email - infonn1@narayananethralaya.com

**ಎನ್.ಎನ್–2** ನಾರಾಯಣ ಹೆಲ್ತ್‌ಸಿಟಿ (ನಾರಾಯಣ ಹೃದಯಾಲಯದ ಆವರಣ)
#258/ಎ, ಬೊಮ್ಮಸಂದ್ರ, ಹೊಸೂರು ರಸ್ತೆ
ಬೆಂಗಳೂರು–560099, ಭಾರತ
ಟೆಲಿಫೋನ್: +91–80–66660655/0658
Email - infonn2@narayananethralaya.com

**ಎನ್.ಎನ್–3** #1/1, 1ನೇ ಮುಖ್ಯರಸ್ತೆ, ಡಿಫೆನ್ಸ್ ಕಾಲೋನಿ, 100 ಅಡಿ ರಸ್ತೆ
ಇಂದಿರಾನಗರ, ಬೆಂಗಳೂರು–560038, ಭಾರತ
ಟೆಲಿಫೋನ್: +91–80–66974000/01/02
Email - infonn3@narayananethralaya.com

**ಎನ್.ಎನ್–4** #63, ರಾಯಲ್ ಮೀನಾಕ್ಷಿ ಮಾಲ್ ಪಕ್ಕ, ಬನ್ನೇರುಘಟ್ಟ ರಸ್ತೆ
ಹುಳಿಮಾವು, ಬೆಂಗಳೂರು–560076, ಭಾರತ
ಟೆಲಿಫೋನ್: +91–80–66121618/1619, +91 9035154170
Email - infonn4@narayananethralaya.com

**ಎನ್.ಎನ್–5** ಪ್ಲಾಟ್ 3–ಸಿ, 1ನೇ ಹಂತ, ದೊಡ್ಡೇನಕ್ಕುಂಡಿ ಇಂಡಸ್ಟ್ರಿಯಲ್ ಏರಿಯಾ
ಮಹದೇವಪುರ ಪಿ. ಓ., ಸೀತಾರಾಮಪಾಳ್ಯ ಮೆಟ್ರೋ ನಿಲ್ದಾಣದ ಪಕ್ಕ
ಬೆಂಗಳೂರು–560048, ಭಾರತ
ಟೆಲಿಫೋನ್: +91–80–66121658/1659
Email - infonn5@narayananethralaya.in

Nnethralaya  Narayananethralaya

www.narayananethralaya.org


THE BEST EYE HOSPITAL IN KARNATAKA
RANKED #1 FOR MORE THAN A DECADE

ONE OF THE HIGHEST Google Reviews HOSPITAL IN THE WORLD 4.9



# ಡಿ.ಸಿ.ಆರ್


## (ಡಾಕ್ರಿಯೋಸಿಸ್ಟೋರೈನಾಸ್ಟೋಮಿ)

CELEBRATING 40 YEARS IN EYE CARE

NARAYANA NETHRALAYA
your faith shall heal you

## ಡಿ.ಸಿ.ಆರ್ ಶಸ್ತ್ರಚಿಕಿತ್ಸೆ ಎಂದರೇನು?

ಕಣ್ಣಿನಿಂದ ನೀರು ಒಳಹೋಗಲು ಒಂದು ಸೂಕ್ಷ್ಮನಾಳವಿರುತ್ತದೆ. ಈ ಸೂಕ್ಷ್ಮನಾಳ ಮುಚ್ಚಿಕೊಂಡರೆ ಕಣ್ಣೀರು ಮತ್ತು ಕಣ್ಣಿನ ಗೀಜು ಕಣ್ಣಿನಿಂದಲೇ ಹೊರಬರುತ್ತದೆ. ಕಣ್ಣಿನಿಂದ ಮೂಗಿಗೆ ಹೊಸನಾಳದ ಮಾರ್ಗವನ್ನು ಸೃಷ್ಟಿಸುವ ಶಸ್ತ್ರಕ್ರಿಯೆಗೆ ಡಿ.ಸಿ.ಆರ್ ಎಂದು ಕರೆಯುತ್ತೇವೆ.




## ಡಿ.ಸಿ.ಆರ್ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವುದು ಅಗತ್ಯವೇ?

ಸೂಕ್ಷ್ಮನಾಳ (ನೆಸೊಲಾಕ್ರಿಮಲ್ ನಾಳ) ಮುಚ್ಚಿಕೊಂಡಿರುವುದರಿಂದ ಕಣ್ಣಿನಲ್ಲಿರುವ ಕಣ್ಣೀರು, ಗೀಜು, ಕೊಳಕು ಕಣ್ಣಿನ ಪಕ್ಕದಲ್ಲಿರುವ ಲ್ಯಾಕ್ರಿಮಲ್ ಚೀಲದಲ್ಲಿ ಸಂಗ್ರಹಗೊಳ್ಳುತ್ತದೆ. ಈ ಚೀಲದಲ್ಲಿ ಊತ, ನೋವು ಮತ್ತು ಸೋಂಕು ತಗಲುವ ಸಾಧ್ಯತೆ ಇರುತ್ತದೆ. ಇದರಿಂದಾಗಿ ಶಸ್ತ್ರಚಿಕಿತ್ಸೆಯ ಅಗತ್ಯವಿರುತ್ತದೆ. ಹಾಗೂ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವವರಲ್ಲಿ ಈ ತೊಂದರೆ ಕಂಡುಬಂದರೆ ಡಿ.ಸಿ.ಆರ್ ಶಸ್ತ್ರಚಿಕಿತ್ಸೆಯನ್ನು ಮೊದಲು ಮಾಡಬೇಕಾಗುತ್ತದೆ. ಈ ಚಿಕಿತ್ಸೆಯನ್ನು ಮಾಡಿಸದಿದ್ದರೆ ಸೋಂಕಿನ ಅಪಾಯವನ್ನು ಹೆಚ್ಚಿಸುತ್ತದೆ.

## ಮಕ್ಕಳು ಡಿ.ಸಿ.ಆರ್ ಚಿಕಿತ್ಸೆ ಮಾಡಿಸಿಕೊಳ್ಳಬಹುದೇ?

ಹೌದು. 4 ವರ್ಷ ಮೇಲ್ಪಟ್ಟ ಮಕ್ಕಳು ಡಿ.ಸಿ.ಆರ್ ಚಿಕಿತ್ಸೆ ಮಾಡಿಸಿಕೊಳ್ಳಬಹುದು.

## ಡಿ.ಸಿ.ಆರ್ ಅನ್ನು ಹೇಗೆ ನಿರ್ವಹಿಸಲಾಗುತ್ತದೆ? ಫಲಿತಾಂಶಗಳೇನು?


ಡಿ.ಸಿ.ಆರ್ ಅನ್ನು ಎರಡು ರೀತಿಯಲ್ಲಿ ನಿರ್ವಹಿಸಬಹುದು – ಬಾಹ್ಯವಾಗಿ ಮೂಗಿನ ಪಕ್ಕದಲ್ಲಿ ಸಣ್ಣ (ಅರ್ಧ ಇಂಚಿಗಿಂತ ಕಡಿಮೆ) ರೇಖೆಯ ಮೂಲಕ; ಎಂಡೋನಾಸಲಿ – ಮೂಗಿನ ಮೂಲಕ ನಿರ್ವಹಿಸಲಾಗುತ್ತದೆ.

## ಹೊರಗಿನಿಂದ (ಬಾಹ್ಯ) ಮಾಡುವ ಡಿ.ಸಿ.ಆರ್ ಶಸ್ತ್ರಚಿಕಿತ್ಸೆ ಎಂದರೇನು?

ಮೂಗಿನ ಬದಿಯಲ್ಲಿ ಒಂದು ಪುಟ್ಟ ರಂಧ್ರವನ್ನು ಮಾಡಿ, ಕಣ್ಣೀರ ಚೀಲ ಮತ್ತು ಮೂಗಿನ ನಡುವೆ ಇರುವ ಒಂದು ಮೂಳೆಯನ್ನು ಕತ್ತರಿಸಿ ಕಣ್ಣೀರ ಚೀಲ ಮತ್ತು ಮೂಗಿನ ನಡುವೆ ಹೊಲಿಗೆ ಹಾಕಿ ಹೊಸ ಮಾರ್ಗವನ್ನು ಸೃಷ್ಟಿಸುತ್ತೇವೆ. ಕೆಲವು ರೋಗಿಗಳಿಗೆ ಶಸ್ತ್ರಚಿಕಿತ್ಸೆಯ ಸಮಯದಲ್ಲಿ ಸಿಲಿಕಾನ್ ಟ್ಯೂಬ್‌ನ್ನು ಮಾರ್ಗ ಮಧ್ಯದಲ್ಲಿ ಇಟ್ಟಿರುತ್ತೇವೆ. ಹೀಗೆ ಇಟ್ಟಿರುವ ಟ್ಯೂಬ್ ಅನ್ನು ಗಾಯ ವಾಸಿಯಾದ ನಂತರ 6–12 ವಾರಗಳಲ್ಲಿ ತೆಗೆದು ಬಿಡುತ್ತೇವೆ. ಈ ರೀತಿಯ ಶಸ್ತ್ರಚಿಕಿತ್ಸೆ ಕಣ್ಣಿನ ಬಳಿ ಒಂದು ಸಣ್ಣ ಕಲೆ ಉಳಿಯಬಹುದು. ಬಾಹ್ಯ ಡಿ.ಸಿ.ಆರ್ ತುಂಬಾ ಯಶಸ್ವಿ ಶಸ್ತ್ರಚಿಕಿತ್ಸೆಯಾಗಿದ್ದು, 100 ರೋಗಿಗಳಲ್ಲಿ 95 ಮಂದಿಗೆ ಈ ಸಮಸ್ಯೆಯಿಂದ ಪೂರ್ತಿಯಾಗಿ ಗುಣಮುಖರಾಗಿದ್ದಾರೆ.



ಶಸ್ತ್ರಚಿಕಿತ್ಸೆಯ ನಂತರ ಇರುವ ಮಸುಕಾದ ಗಾಯ



ಸಿಲಿಕೋನ್ ಇನ್ಟುಬೇಷನ್

## ಶಸ್ತ್ರಚಿಕಿತ್ಸೆಯ ನಂತರ ಯಾವಾಗ ಟ್ಯೂಬ್‌ನ್ನು ತೆಗೆಯುತ್ತಾರೆ?

ಈ ಶಸ್ತ್ರಚಿಕಿತ್ಸೆಯಾದ ಮೇಲೆ ರೋಗಿಯ ಗಾಯ ವಾಸಿಯಾಗಲು 6 ವಾರಗಳು ಬೇಕಾಗುತ್ತದೆ. ಆದ್ದರಿಂದ ಟ್ಯೂಬನ್ನು 6 ವಾರಗಳ ನಂತರವೇ ಹೊರತೆಗೆಯುತ್ತಾರೆ.

## ಡಿ.ಸಿ.ಆರ್ ಶಸ್ತ್ರಚಿಕಿತ್ಸೆಯ ನಂತರ ಯಾವಾಗ ಪೊರೆ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬಹುದು?

ಡಿ.ಸಿ.ಆರ್ ಶಸ್ತ್ರಚಿಕಿತ್ಸೆಯಾದ 4 ವಾರಗಳ ನಂತರವೇ ರೋಗಿಯು ಪೊರೆ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬಹುದು.

## ಯಾವ ರೀತಿಯ ಡಿ.ಸಿ.ಆರ್ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಳ್ಳಬಹುದು?

ಎಂಡೋಸ್ಕೋಪಿಕ್ ಡಿ.ಸಿ.ಆರ್ ಚಿಕಿತ್ಸೆಯಲ್ಲಿ ಕಲೆಯೇ ಇರುವುದಿಲ್ಲ. ಹೊರಗಿನ (External) ಡಿ.ಸಿ.ಆರ್ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಳ್ಳುವವರಿಗೆ ಕಲೆ ಇದ್ದರೂ, ಕೆಲವು ತಿಂಗಳುಗಳ ನಂತರ ಮಾಯವಾಗುತ್ತದೆ. ಹೊರಗಿನ ಡಿ.ಸಿ.ಆರ್ ಶಸ್ತ್ರಚಿಕಿತ್ಸೆಯು ಉತ್ತಮವಾಗಿರುತ್ತದೆ. ಏಕೆಂದರೆ ಇದು ಶಾಶ್ವತ ಪರಿಹಾರವಾಗಿರುತ್ತದೆ. ಎಂಡೋಸ್ಕೋಪಿಕ್ ಶಸ್ತ್ರಚಿಕಿತ್ಸೆಯು ಮೂಗಿನ ಅಥವಾ ಸೈನಸ್ ತೊಂದರೆ ಇದ್ದವರಿಗೆ ಉತ್ತಮ ಶಸ್ತ್ರಚಿಕಿತ್ಸೆಯಾಗಿರುತ್ತದೆ. ಒಂದೇ ಶಸ್ತ್ರಚಿಕಿತ್ಸೆಯಿಂದ ಎರಡು ತೊಂದರೆಗಳಿಗೆ ಪರಿಹಾರ ಸಿಗುತ್ತದೆ. ನಿಮಗೆ ಯಾವ ರೀತಿಯ ಶಸ್ತ್ರಚಿಕಿತ್ಸೆಯು ಸೂಕ್ತವಿರುತ್ತದೆ ಎಂಬುದನ್ನು ತಪಾಸಣೆಯ ನಂತರ ತಜ್ಞರು ತಿಳಿಸುತ್ತಾರೆ.